**ಸಾಕ್ಷಿಯನ್ನು ದಿನಾಂಕಃ 10-04-2019 ರಂದು ಪುನಃ ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಆರ್ ಕೆ ಪ್ರತಿವಾದಿ 1 ಮತ್ತು 2 ರವರ ಪರ ವಕೀಲರಿಂದ**

**ಪ್ರತಿವಾದಿ 1 ಮತ್ತು 2 ಹಾಗೂ ಅವರ ವಕೀಲರು ಗೈರು ಹಾಜರಿ ಆದ್ದರಿಂದ ಪಾಟೀ ಸವಾಲು ಏನು ಇಲ್ಲ ತಗೆದುಕೊಳ್ಳಲಾಯಿತ್ತು.**

**ಪಾಟೀ ಸವಾಲುಃ ಶ್ರೀ ಬಿ ಎಚ್ ಪಿ ಪ್ರತಿವಾದಿ 3 ಮತ್ತು 11 ರವರ ಪರ ವಕೀಲರಿಂದ**

ವಾದಿ 1 ರಿಂದ 4 ನನ್ನ ತಮ್ಮಂದಿರೂ. 5 ನೇ ವಾದಿ ನನ್ನ ತಾಯಿ 6 ನೇ ವಾದಿ ನನ್ನ ತಂಗಿ. ನಾನು ಮತ್ತು ವಾದಿಯರು ಸೃಯದಸಾಬ ಕುಡಚಿ ಇವರ ಮಕ್ಕಳು ಇರುತ್ತೇವೆ. ನಮ್ಮ ತಂದೆಗೆ ಇಬ್ಬರು ಹೆಂಡತಿಯರು. ನಮ್ಮ ತಂದಗೆ ಒಟ್ಟು 15 ಜನ ಮಕ್ಕಳು ಇರುತ್ತಾರೆ. ನಮ್ಮ ತಂದೆಯ ಎರಡುನೇ ಹೆಂಡತಿ ಹೆಸರು ಸಾಯಬೀ ಸದರಿಯವರಿಗೆ 8 ಜನ ಮಕ್ಕಳು. 1 ಮತ್ತು 2 ನೇ ವಾದಿ ನನ್ನ ಸ್ವಂತ ತಮ್ಮ. ನನಗೂ 1 ಮತ್ತು 2 ನೇ ವಾದಿಗೆ ಸಂಬಂದ ಚನ್ನಾಗಿ ಇದೆ ಎಂದರೆ ಸರಿ. ನಾನು ಮುಧೋಳದಲ್ಲಿ ವಾಸ ಇರುತ್ತೇನೆ ಎಂದರೆ ಸರಿ. ಈ ಮೊದಲು ಈ ದಾವೆಯ ಆಸ್ತಿಯ ಬಗ್ಗೆ ಏನು ಯಾವ ಯಾವ ದಾವೆ ನಡೆದಿದ್ದವು ಎಂದು ನನಗೆ ಗೋತ್ತಿಲ್ಲ. 1 ನೇ ವಾದಿ ನನಗೆ ಈ ದಾವೆ ಮಾಡುವ ಸಮಯದಲ್ಲಿ ಈ ಮೊದಲು ಮಾಡಿದ ದಾವೆಗಳ ಬಗ್ಗೆ ಹೇಳಿದ್ದರು ಎಂದರೆ ಸರಿ. ಈ ದಾವೆಯಲ್ಲಿ 1 ನೇ ವಾದಿ ಏನು ಬರೆಸಿದ್ದಾರೆ ಎಂದು ನನಗೆ ಗೋತ್ತಿಲ್ಲ. ಈ ದಾವೆಗೆ ನಾನು ವಯಕ್ತಿಕವಾಗಿ ನನ್ನ ತಕರಾರು ಸಲ್ಲಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿ ನಮ್ಮ ವಕೀಲರು ಕೊಟ್ಟಿರುತ್ತಾರೆ. 1 ನೇ ವಾದಿಯು ಈ ದಾವೆಯಲ್ಲಿ ಏನು ಹೇಳಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 5 ನೇ ಪ್ರತಿವಾದಿಗೆ ಲೋಕದ ಜ್ಞಾನ ಇರುವುದಿಲ್ಲ ಎಂದು ಬರೆಸಿದ್ದೇನೆ. ಈಗ 4-5 ವರ್ಷಗಳಿಂದ 5 ನೇ ಪ್ರತಿವಾದಿಗೆ ಲೋಕದ ಜ್ಞಾನ ಇರುವುದಿಲ್ಲ.

3 ಮತ್ತು 11 ನೇ ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ನನಗೆ ಮಾಹಿತಿ ಇಲ್ಲ. 4 ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕರು ಇದ್ದು ಅವರು ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 4 ನೇ ಪ್ರತಿವಾದಿಗೆ 5 ನೇ ಪ್ರತಿವಾದಿಯು ದಾವಾ ಆಸ್ತಿಯು ಬಕ್ಷಿಷ ಮಾಡಿಕೊಟ್ಟಿದ್ದರು ಎಂದರೆ ಸರಿ. 4 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ದಿಃ12-09-2013 ರಂದು ರೂ. 1 ಲಕ್ಷ 77 ಸಾವಿರಕ್ಕೆ ನೊಂದಾಯಿತ ಖರೀದಿ ಪತ್ರದ ಅಡಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ದಾವಾ ಆಸ್ತಿಯ ದಿಃ 16-03-2014 ರಂದು 11 ನೇ ಪ್ರತಿವಾದಿಗೆ ರೂ. 1 ಲಕ್ಷ 95 ಸಾವಿರಕ್ಕೆ ನೊಂದಾಯಿತ ಖರೀದಿ ಪತ್ರದ

ಅಡಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸ ನಂ. 14/2/ಅ/3 ಪೈಕಿ 20 ಗುಂಟೆ ಜಮೀನಿಗೆ ನಮ್ಮ ಮನೆತನಕ್ಕೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರು ಸಹ ಖೊಟ್ಟಿ ರೀತಿಯಿಂದ ಈ ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಯಿಂದ 4 ನೇ ಪ್ರತಿವಾದಿಗೆ ಹಸ್ತಾಂತರಿದ ಬಗ್ಗೆ ಹಾಗೂ 4 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದ ಬಗ್ಗೆ ಮತ್ತು 3 ನೇ ಪ್ರತಿವಾದಿ 11 ಪ್ರತಿವಾದಿಗೆ ಮಾರಾಟ ಮಾಡಿದ್ದ ಬಗ್ಗೆ ನನಗೂ ನಮ್ಮ ಮನೆತನ ಎಲ್ಲಾ ಸದಸ್ಯರಿಗೂ ಗೋತ್ತಿದ್ದರು ಸಹ ನಾವು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ .

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮುಧೋಳ